ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಕೆ.ಗೋವಿಂದರಾಜು ಹಾಗೂ ಇತರರು
ನಿಯಮ -72 ರ ಅಡಿಯಲ್ಲಿ ನೀಡಿರುವ ಸೂಚನಾ ಪತ್ರಕ್ಕೆ ಉತ್ತರ

**ಸೂಚನೆ:** ಬೆಂಗಳೂರು ನಗರದಲ್ಲಿ ಹಾಗೂ ಬೆಂಗಳೂರು ನಗರದ ಹೊರವಲಯದ ರಸ್ತೆಗಳಲ್ಲಿ ದ್ವಿಚಕ್ರ ವಾಹನ ಸವಾರರು ಅತಿ ವೇಗವಾಗಿ ಕರ್ಕಶ ಶಬ್ದ ಮಾಡುತ್ತಾ ರಸ್ತೆಯಲ್ಲಿ ಸಂಚರಿಸುವ ಇತರೆ ವಾಹನ ಮತ್ತು ವಾಹನ ಸವಾರರಿಗೆ ಕಿರಿಕಿರಿ ಉಂಟು ಮಾಡುತ್ತಿರುವುದಲ್ಲದೆ ಭೀಕರ ಅಪಘಾತಗಳಿಂದಾಗಿ ಪ್ರಾಣ ಹಾನಿಗೂ ಕಾರಣವಾಗುತ್ತಿರುವ ವ್ಹೀಲಿಂಗ್ ಸಮಸ್ಯೆಯು ದಿನೇ ದಿನೇ ಹೆಚ್ಚುತ್ತಿರುವುದು ಇಂತಹ ಆತಂಕಕಾರಿ ವಿಷಯವಾಗಿರುತ್ತದೆ. ಈ ವ್ಹೀಲಿಂಗ್ ಸವಾರರು ಮದ್ಯಪಾನ ಮತ್ತು ಇತರೆ ಮಾದಕ ಪದಾರ್ಥಗಳ ಸೇವನೆ ಮಾಡಿರುತ್ತಾರೆಂಬುದನ್ನು ಗಮನಿಸಿದಾಗ ಇಂದಿನ ಯುವ ಪೀಳಿಗೆಯ ಕಾನೂನು ಬಾಹಿರ ಚಟುವಟಿಕೆಗಳನ್ನು ಹತ್ತಿಕ್ಕುವ & ನಿಯಂತ್ರಿಸುವ ನಿಟ್ಟಿನಲ್ಲಿ ಪೊಲೀಸ್ ಇಲಾಖೆಯ ಶ್ರಮ ಶ್ಲಾಘನೀಯವಾದರೂ ಕಾನೂನಿನ ಚೌಕಟ್ಟಿನಲ್ಲಿ ಇಂತಹ ಪುಂಡಾಟಗಳಿಗೆ ಕಠಿಣ ಶಿಕ್ಷೆ ವಿಧಿಸಬೇಕಾದದು ಅನಿವಾರ್ಯವಾಗಿರುತ್ತದೆ. ರಸ್ತೆಗಳಲ್ಲಿ ಸಂಚರಿಸುವ ಸಭ್ಯ ನಾಗರೀಕರು ವಾಹನ ಸವಾರರ ಪ್ರಾಣಕ್ಕೂ ಕುತ್ತು ತರುವ ಇಂತಹ ಚಟುವಟಿಕೆಗಳನ್ನು ಹತ್ತಿಕ್ಕುವ ಬಗ್ಗೆ.

**ಉತ್ತರ:** ವಿವಿಧ ಸಂಚಾರ ನಿಯಮ ಉಲ್ಲಂಘನೆಗಳಲ್ಲಿ ಕರ್ಕಶ ಶಬ್ದ ಮಾಡುವುದು ಹಾಗೂ ವ್ಹೀಲಿಂಗ್ ಹಾವಳಿಗಳನ್ನು ಗಂಭೀರ ಸ್ವರೂಪದ ಉಲ್ಲಂಘನೆಗಳಾಗಿ ಪರಿಗಣಿಸಲಾಗಿದೆ.

ಕಾನೂನಿನ ಅಡಿಯಲ್ಲಿ ವ್ಹೀಲಿಂಗ್ ಮತ್ತು ಡ್ರಾಗ್ ರೇಸ್ ನಿಷಿದ್ಧ. ವ್ಹೀಲಿಂಗ್ ಮತ್ತು ಡ್ರಾಗ್ ರೇಸ್‌ನಲ್ಲಿ ತೊಡಗಿ ಸ್ವಯಂ ಅಪಘಾತಕ್ಕೀಡಾಗಿ ಸಂಭವಿಸುವ ಸಾವುಗಳನ್ನು ತಪ್ಪಿಸಲು ಹಾಗೂ ಈ ವಾಹನಗಳಿಂದ ಅಮಾಯಕ ಸಾರ್ವಜನಿಕರು ಸಾವು-ನೋವಿಗೀಡಾಗುವುದನ್ನು ತಪ್ಪಿಸುವ ಸಲುವಾಗಿ ಕಾನೂನಿನಡಿ ಈ ಕೆಳಕಂಡಂತೆ ಕಠಿಣ ಕ್ರಮಗಳನ್ನು ಕೈಗೊಳ್ಳಲಾಗಿದೆ:-

- ವ್ಹೀಲಿಂಗ್ ಮಾಡುವಾಗ ಪೊಲೀಸರ ಕೈಗೆ ಸಿಕ್ಕಿಬಿದ್ದರೆ ಅಂತಹವರ ವಿರುದ್ಧ ಕಲಂ 189 ಐ.ಎಂ.ವಿ ಕಾಯ್ದೆ ಅಡಿಯಲ್ಲಿ ಪ್ರಕರಣ ದಾಖಲಿಸಿ ವಾಹನವನ್ನು ಮತ್ತು ಚಾಲನಾ ಪರವಾನಿಗೆಯನ್ನು ವಶಪಡಿಸಿಕೊಂಡು ಪರವಾನಿಗೆಯನ್ನು ಅಮಾನತ್ತಿಗಾಗಿ ಸಂಬಂಧಪಟ್ಟ ಪ್ರಾದೇಶಿಕ ಸಾರಿಗೆ ಕಛೇರಿಗೆ ಕಳುಹಿಸಿಕೊಡಲಾಗುವುದು. ಪೋಷಕರನ್ನು ಕರೆಯಿಸಿ ಮಕ್ಕಳಿಗೆ ಈ ರೀತಿಯ ದುಸ್ಸಾಹಸ ಮಾಡಿ ಅನಾಹುತ ಉಂಟು ಮಾಡದಂತೆ ಸೂಕ್ತ ಬುದ್ದಿವಾದ ಹೇಳಲು ಕೇಳಿಕೊಳ್ಳಲಾಗುತ್ತಿದೆ.
- ಸಾರ್ವಜನಿಕರ ಸುರಕ್ಷತೆ ದೃಷ್ಟಿಯಿಂದ ಈ ಹಾವಳಿಯನ್ನು ತಪ್ಪಿಸಲು ವ್ಹೀಲಿಂಗ್‌ನಲ್ಲಿ ತೊಡಗಿಸಿಕೊಂಡವರ ವಿರುದ್ಧ ಅಜಾಗರೂಕತೆ ಹಾಗೂ ನಿರ್ಲಕ್ಷ್ಯ ಚಾಲನೆ ಯಡಿ ಐಪಿಸಿ ಸೆಕ್ಷನ್ 279 ರಡಿಯಲ್ಲಿ ಕ್ರಿಮಿನಲ್ ಪ್ರಕರಣ ದಾಖಲಿಸಿ ಕ್ರಮ ತೆಗೆದುಕೊಳ್ಳಲಾಗುತ್ತಿದೆ.
- ಹಬ್ಬ ಹರಿದಿನಗಳಲ್ಲಿ ಹಾಗೂ ರಜಾ ದಿನಗಳಲ್ಲಿ ವ್ಹೀಲಿಂಗ್ ನಡೆಯುವ ಸಾಧ್ಯತೆಗಳಿದ್ದು ಆ ದಿನಗಳಲ್ಲಿ ವಿಶೇಷ ಕಾರ್ಯಾಚರಣೆಯನ್ನು ಹಮ್ಮಿಕೊಳ್ಳಲಾಗುತ್ತಿದೆ.
- ಎಲ್ಲಾ ಅಧಿಕಾರಿಗಳು ಮತ್ತು ಸಿಬ್ಬಂದಿಗಳಿಗೆ ಯಾವುದೇ ವ್ಯಕ್ತಿ ವ್ಹೀಲಿಂಗ್ ತೊಡಗಿಸಿಕೊಂಡಿರುವುದು ಕಂಡು ಬಂದಲ್ಲಿ ನಿರ್ಧಾಕ್ಷಿಣ್ಯವಾಗಿ ಕ್ರಮ ತೆಗೆದು ಕೊಳ್ಳಲು ಸೂಚಿಸಲಾಗಿದೆ. ಹಾಗೂ ಈ ಅಪರಾಧದಡಿಯಲ್ಲಿ ಭಾಗಿಯಾಗಿರುವವರ ವಿರುದ್ಧ ವಿಶೇಷ ಗಮನಹರಿಸಲು ತಿಳಿಸಲಾಗಿದೆ.

➢ ಸಾರ್ವಜನಿಕರ ಜೀವಕ್ಕೆ ಅಪಾಯಕಾರಿಯಾಗುವ ರೀತಿ ವ್ಹೀಲಿಂಗ್ ಮಾಡುವ ಸವಾರರ ವಿರುದ್ಧ ಮೊದಲನೇ ಸಲವೇ ಮೋಟಾರು ವಾಹನ ಕಾಯ್ದೆ ಕಲಂ 20 ಹಾಗೂ ಕಲಂ 184ರ ಜೊತೆಗೆ ನಿಯಮ 21 ರೀತ್ಯಾ ಕ್ರಮ ಕೈಗೊಳ್ಳಬಹುದಾಗಿದ್ದು ಈ ಸಂಬಂಧ ಸಂಚಾರ ವಿಭಾಗದ ಎಲ್ಲಾ ಅಧಿಕಾರಿಗಳಿಗೆ ದಿನಾಂಕ: 10–11–2011 ರಂದು ಸುತ್ತೋಲೆ–74 ಅನ್ನು ಹೊರಡಿಸಲಾಗಿದೆ.

➢ ವ್ಹೀಲಿಂಗ್ ತೊಡಗಿಸಿಕೊಂಡಿರುವವರ ವಿರುದ್ಧ ಕಳೆದ 3 ವರ್ಷಗಳಲ್ಲಿ ಕೆಳಕಂಡಂತೆ ಪ್ರಕರಣಗಳನ್ನು ದಾಖಲಿಸಿಕೊಂಡು ಕ್ರಮ ಕೈಗೊಳ್ಳಲಾಗಿದೆ:-

| ವರ್ಷ | ದಾಖಲಿಸಿರುವ ಪ್ರಕರಣಗಳು | | ಒಟ್ಟು ಪ್ರಕರಣಗಳು |
|---|---|---|---|
| | ಕಲಂ 189 ಐಎಂವಿ ಕಾಯ್ದೆ ಅಡಿಯಲ್ಲಿ | ಕಲಂ 279 ಐಪಿಸಿ ಅಡಿಯಲ್ಲಿ | |
| 2017 | 168 | 138 | 306 |
| 2018 | 79 | 275 | 354 |
| 2019 | 38 | 153 | 191 |
| 2020 (ಫೆಬ್ರವರಿ) | 5 | 127 | 132 |

ಆಸ್ಪತ್ರೆಗಳು, ಪೂಜಾ ಮಂದಿರ, ಶಾಲಾ ಕಾಲೇಜುಗಳ ಬಳಿ ಓಡಾಡುವ ಈ ಸ್ಥಳಗಳಲ್ಲಿ "ನಿಶ್ಯಬ್ದ ವಲಯ" ಎಂದು ಘೋಷಿಸಿ ಸಂಖ್ಯೆ: 634/ಸಂವಿ/ಸಿಪಿ/2003 ದಿನಾಂಕ: 24–11–2003 ರಂದು ಅಧಿಸೂಚನೆಯನ್ನು ಹೊರಡಿಸಲಾಗಿದೆ.

ಶಬ್ದ ಮಾಲಿನ್ಯ ಸಾಂದ್ರತೆಯ ಹೆಚ್ಚಿನ ಪ್ರಮಾಣವು ವಾಹನಗಳಿಂದ ಆಗುತ್ತಿರುತ್ತದೆ.ಬೆಂಗಳೂರು ನಗರದಲ್ಲಿ, ನಿರ್ಧಿಷ್ಟಗೊಳಿಸಿದ ಶಬ್ಧ ಮಾಲಿನ್ಯದ ಸಾಂದ್ರತೆಗಿಂತ 6 ಪಟ್ಟು ಹೆಚ್ಚು ಶಬ್ಧ ಮಾಲಿನ್ಯ ದಾಖಲಾಗಿರುತ್ತದೆ.

<u>ಶಬ್ಧ ಮಾಲಿನ್ಯ ಸಂಬಂಧ ಈ ಕೆಳಕಂಡಂತೆ ಕ್ರಮಗಳನ್ನು ಕೈಗೊಳ್ಳಲಾಗಿದೆ.</u>

1. ವಾಯು ಮತ್ತು ಶಬ್ದ ಮಾಲಿನ್ಯಕ್ಕೆ ಸಂಬಂಧಿಸಿದಂತೆ ನಿಯಮಿಸಲಾದ ಗುಣಮಟ್ಟಗಳನ್ನು ಉಲ್ಲಂಘಿಸಿ ಯಾವುದೇ ಸಾರ್ವಜನಿಕ ಸ್ಥಳದಲ್ಲಿ ಯಾವುದೇ ಮೋಟಾರು ವಾಹನವನ್ನು ನಡೆಸುವುದು, ನಡೆಸುವಂತೆ ಮಾಡುವುದು ಅಥವಾ ನಡೆಸಲು ಅನುಮತಿಸಿದ್ದಲ್ಲಿ ಕೇಂದ್ರ ಮೋಟಾರು ವಾಹನ ನಿಯಮಗಳ ನಿಯಮ 115, 119 ಮತ್ತು 120ರ ಉಲ್ಲಂಘನೆಗೆ ಮೋಟಾರು ವಾಹನ ಕಾಯ್ದೆಯ ಕಲಂ 190(2)ರ ಅಡಿಯಲ್ಲಿ ಸೂಚಿಸಿರುವ ದಂಡಕ್ಕೆ ಅನುಗುಣವಾಗಿ ದಂಡವನ್ನು ವಿಧಿಸಲಾಗುತ್ತಿದೆ.

2. ಬೆಂಗಳೂರು ನಗರದಾದ್ಯಂತ ಶಬ್ದ ಮಾಲಿನ್ಯ ಉಂಟು ಮಾಡುವವರ ವಿರುದ್ಧ ವಿಶೇಷ ಕಾರ್ಯಾಚರಣೆ ಹಮ್ಮಿಕೊಂಡು ಕ್ರಮ ಕೈಗೊಳ್ಳುತ್ತಿದ್ದು, ಕಳೆದ 3 ವರ್ಷಗಳಲ್ಲಿ ಈ ಕೆಳಕಂಡಂತೆ ಪ್ರಕರಣಗಳನ್ನು ದಾಖಲಿಸಲಾಗಿದೆ:-

| ಪ್ರಕರಣಗಳ ವಿಧ | ದಾಖಲಿಸಿದ ಪ್ರಕರಣಗಳು | | |
|---|---|---|---|
| | 2018 | 2019 | 2020 (29/02/2020) |
| ಕರ್ಕಶ ಶಬ್ದ | 25860 | 16332 | 373 |
| ನಿಷೇಧ ಸ್ಥಳಗಳಲ್ಲಿ ಹಾರ್ನ್ ಬಳಕೆ | 220 | 2156 | 5 |
| ದೋಷಪೂರಿತ ಸೈಲೆನ್ಸರ್ | 9519 | 5338 | 475 |

3. ಶಬ್ದ ಮಾಲಿನ್ಯವನ್ನು ತಡೆಗಟ್ಟಲು ಸಾರ್ವಜನಿಕರಲ್ಲಿ ಹಾಗೂ ವಾಹನ ಚಾಲಕರಿಗೆ ಅರಿವು ಮೂಡಿಸುವ ಸಲುವಾಗಿ ಭಿತ್ತಿ ಪತ್ರಗಳನ್ನು ಹಂಚುವುದಲ್ಲದೆ ಅವರುಗಳಿಗೆ ಶಬ್ದ ಮಾಲಿನ್ಯ ಮತ್ತು ವಾಯು ಮಾಲಿನ್ಯದ ಬಗ್ಗೆ ಮನವರಿಕೆ ಮಾಡಿಕೊಡಲಾಗುತ್ತಿದೆ.

4. ಶಬ್ದ ಮಾಲಿನ್ಯವನ್ನು ತಡೆಗಟ್ಟಲು ದ್ವಿಮುಖ ಸಂಚಾರ ವ್ಯವಸ್ಥೆ ಇದ್ದಂತ 193 ರಸ್ತೆಗಳಲ್ಲಿ ಏಕಮುಖ ಸಂಚಾರ ವ್ಯವಸ್ಥೆಯನ್ನು ಜಾರಿಗೆ ತರಲಾಗಿದೆ.

---

**ಹೆಚ್‌ಡಿ 115 ಎಸ್‌ಎಸ್‌ಟಿ 2020**

**(ಬಸವರಾಜ ಬೊಮ್ಮಾಯಿ)**
**ಗೃಹ ಸಚಿವರು**